# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1965(2063)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : ಬಿಸ್ಕೂರು ಗ್ರಾಮಪಂಚಾಯ್ತಿ ಬಿಸ್ಕೂರು ವಾರ್ಡ್‌ನಲ್ಲಿ NAREGA ಯೋಜನೆ ಕುರಿತು

(ಅ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ, ಬಿಸ್ಕೂರು ಗ್ರಾಮ ಪಂಚಾಯಿತಿ ಬಿಸ್ಕೂರು ವಾರ್ಡ್ ವ್ಯಾಪ್ತಿಯಲ್ಲಿ 2018-19, 2019-20 ಹಾಗೂ 2020-21ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ನಿರ್ಮಾಣ ಮಾಡಿರುವ ಕುರಿ ಹಾಗೂ ಮೇಕೆ ಶೆಡ್‌ಗಳ ಸಂಖ್ಯೆ ಎಷ್ಟು; ಅದಕ್ಕಾಗಿ ಖರ್ಚಾಗಿರುವ ಅನುದಾನವೆಷ್ಟು;

(ಆ) ಕಾರ್ಯ ನಿರ್ವಹಿಸುತ್ತಿರುವ ಶೆಡ್‌ಗಳ ಸಂಖ್ಯೆ ಎಷ್ಟು; ಹಾಳಾಗಿರುವ ಶೆಡ್‌ಗಳೆಷ್ಟು;

(ಇ) 2017-18, 2018-19 ಹಾಗೂ 2019-20ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಸದರಿ ವಾರ್ಡ್ ವ್ಯಾಪ್ತಿಗೆ ನಿರ್ಮಾಣ ಮಾಡಿರುವ ಕುರಿ ಹಾಗೂ ಮೇಕೆ ಶೆಡ್‌ಗಳ ನಿರ್ವಹಣೆಗೆ ಹಂಚಿಕೆಯಾಗಿರುವ ಮೊತ್ತವೆಷ್ಟು;

(ಈ) ಶೆಡ್‌ಗಳಿಗಾಗಿ ಬಿಡುಗಡೆಯಾದ ಹಣವನ್ನು ಇನ್ನಿತರೆ ಕಾರ್ಯಗಳಿಗೆ ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ತಡೆಯಲು ಕೈಗೊಂಡ ಕ್ರಮಗಳೇನು;

(ಉ) ಸದರಿ ಶೆಡ್‌ಗಳಲ್ಲಿ ಜಾನುವಾರುಗಳನ್ನು ಸಾಕಾಣಿಕೆ ಮಾಡುವ ಬದಲು ಇನ್ನಿತರೆ ಚಟುವಟಿಕೆಗಳಿಗಾಗಿ ಬಳಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ತಡೆಯಲು ಕೈಗೊಂಡ ಕ್ರಮಗಳೇನು?